(ಗೊಂದಲ)

ಉಪಾಧ್ಯಕ್ಷರು:- ಈಗ ಮಾನ್ಯ ಪುಟ್ಟಣ್ಣಯ್ಯನವರು ಮಾತನಾಡಲಿ. ತಾವೆಲ್ಲ ಕುಳಿತುಕೊಳ್ಳಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಮಾನ್ಯ ಅಧ್ಯಕ್ಷರೇ, ಬೆಳಗಾಂ ಏರಿಯಾದಲ್ಲಿ ಅಕ್ಟೋಬರ್ ನವೆಂಬರ್ ತಿಂಗಳ ಪ್ಲಾಂಟೇಶನ್. ಮಂಡ್ಯ ಜಿಲ್ಲೆಯಲ್ಲಿ ಮೇ, ಜೂನ್ ಮತ್ತು ಜುಲೈ ತಿಂಗಳಲ್ಲಿ ಆದ ಪ್ಲಾಂಟೇಶನ್. ಜೂನ್, ಜುಲೈ , ಆಗಸ್ಟ್ ತಿಂಗಳಲ್ಲಿ ಆದಂತಹ ಪ್ಲಾಂಟೇಶನ್ ಅನ್ನು ನಾವು ಮಾರ್ಚಿ ತಿಂಗಳವರೆಗೂ ಕಬ್ಬು ಅರಿಯುತ್ತೇವೆ. ನಿಮ್ಮ ಏರಿಯಾ ಪ್ಲಾಂಟೇಶನ್ಸ್ ಬೇರೆ ಮಂಡ್ಯ ಜಿಲ್ಲೆಯ ಪ್ಲಾಂಟೇಶನ್ನೇ ಬೇರೆ. ಆದ್ದರಿಂದ ಅದು ಒಣಗಿದೆ ಅಂದ್ರೆ ನಷ್ಟ ಯಾರಿಗೆ ಆಗಿದೆ ಎಂದರೆ ರೈತರಿಗೆ ಆಗಿದೆ. ನಾವು ಶೋಕಿ ಮಾಡುವುದಕ್ಕೋಸ್ಕರ ಶಾಸನ ಸಭೆಯಲ್ಲಿ ಹೇಳುವುದಕ್ಕೆ ಬಂದಿದ್ದೇವೆಂದು ತಿಳಿದುಕೊಂಡಿದ್ದೀರೇನು? ದಯವಿಟ್ಟು ಮಾನ್ಯ ಸದಸ್ಯರು ಗಂಭೀರವಾಗಿ ಚಿಂತನೆ ಮಾಡಬೇಕು. ಬೆಳಗಾಂನಲ್ಲಿ ನವೆಂಬರ್, ಡಿಸೆಂಬರ್ ಪ್ಲಾಂಟೇಶನ್ ಇರಬಹುದು, ನಾನು ಒಪ್ಪಿಕೊಳ್ಳುತ್ತೇನೆ. ಮಂಡ್ಯ ಏರಿಯಾ ಪ್ಲಾಂಟೇಶನ್ ಬೇರೆ. ಪ್ಲಾಂಟೇಶನ್ ಪ್ಯಾಟ್ರನ್ ಅನ್ನು ರೈತರು ಯಾರೂ ಅಡಾಪ್ಟ್ ಮಾಡಿಲ್ಲ. ಎಲ್ಲಾ ರೈತರು ಮೂರೇ ತಿಂಗಳಲ್ಲಿ ಪ್ಲಾಂಟೇಶನ್ ಮಾಡುತ್ತಾರೆ. ಶುಗರ್ ಕೇನ್ ಕಂಟ್ರೋಲ್ ಎಂದು ಒಂದು ಭಗವದ್ಗೀತೆಯನ್ನು ಬರೆದುಕೊಂಡಿದ್ದೇವೆ, ಸಕ್ಕರೆಗೆ ಒಂದು ನೀತಿ ಎಂದು ಬರೆದುಕೊಂಡಿದ್ದೇವೆ. ಸಂವಿಧಾನದಲ್ಲಿ ಎಸ್‌ಸಿ ಮತ್ತು ಎಸ್‌ಟಿ ರಿಜರ್ವೇಶನ್ ಬಗ್ಗೆ ಏನು ಮಿಸಲಾತಿ ಬರೆದುಕೊಂಡಿದ್ದೇವೆ, ಹಾಗೆಯೇ ಮಂಡಲ್ ಕಮೀಷನ್ ರಿಜರ್ವೇಷನ್ ಏನು ಬರೆದುಕೊಂಡಿದ್ದೇವೆ ಅದೇ ರೀತಿ ಇಲ್ಲಿಯೂ ಬರೆದುಕೊಂಡಿದ್ದೇವೆ. ಸಕ್ಕರೆಗೆ ಏನು ಒಂದು ಸಂವಿಧಾನ ಬರೆದುಕೊಂಡಿದ್ದೇವೆ ಆ ನಿಯಮದ ಪ್ರಕಾರ ಬಡ್ಡಿ ಸಮೇತ ರೈತರಿಗೆ ಹಣವನ್ನು ಪಾವತಿ ಮಾಡಲಿ, ಅದು ಸರ್ಕಾರದ ಕರ್ತವ್ಯ ಸರ್ಕಾರದ ನೀತಿ. ತಾವು ಬೇಕಾದರೆ ಸ್ಪಾಟ್ ಇನ್ಸ್‌ಪೆಕ್ಷನ್ ಮಾಡುತ್ತೇವೆ ಅಂದ್ರೆ ಮಾನ್ಯ ಲಕ್ಷ್ಮಣ್ಯನವರನ್ನು ಕರೆದುಕೊಳ್ಳಿ ಎಲ್ಲರೂ ಹೋಗೋಣ. ನಮ್ಮದು ತಪ್ಪು ಇದ್ದರೆ ನಾವು ತಿದ್ದಿಕೊಳ್ಳುತ್ತೇವೆ, ಅವರದು ತಪ್ಪು ಇದ್ದರೆ ಅವರು ತಿದ್ದಿಕೊಳ್ಳಲಿ.

(ಇ) ಮುಧೋಳ ತಾಲ್ಲೂಕಿನಲ್ಲಿರುವ ಗೋದಾವರಿ ಸಕ್ಕರೆ ಕಾರ್ಖಾನೆ ಕುರಿತು.

+ ಶ್ರೀ ಗೋವಿಂದ ಮುಕ್ತಪ್ಪ ಕಾಜೋಳ:- ಮಾನ್ಯ ಅಧ್ಯಕ್ಷರೇ, ನನ್ನ ಮತಕ್ಷೇತ್ರದ ಮುಧೋಳ ತಾಲ್ಲೂಕಿನ ಸಮೀರವಾಡಿಯಲ್ಲಿ ಗೋದಾವರಿ ಸಕ್ಕರೆ ಕಾರ್ಖಾನೆ ಇದೆ. ಯಾವ ಒಂದು ಅಳತೆಗೋಲು ಈ ಶುಗರ್‌ಕೇನ್ ಕಂಟ್ರೋಲ್ ಆಕ್ಟ್ ಕೆಳಗೆ ಏರಿಯಾ ರಿಜರ್ವ್ ಮಾಡಿದ್ದಾರೋ ನನಗೆ ಗೊತ್ತಿಲ್ಲ. 5 ತಾಲ್ಲೂಕುಗಳ ಏರಿಯಾ ರಿಜರ್ವ್ ಮಾಡಿದ್ದಾರೆ. ತಮಗೂ ಗೊತ್ತಿದೆ, ನನ್ನ ಹತ್ತಿರದ ಮತಕ್ಷೇತ್ರದವರಾದ ತಾವು ಇದ್ದೀರಿ. 5 ತಾಲ್ಲೂಕಿನಲ್ಲಿ ಸುಮಾರು 55 ಲಕ್ಷ ಟನ್ ಕಬ್ಬು ಬೆಳೆಯುತ್ತಾರೆ. 55 ಲಕ್ಷ ಟನ್ ಕಬ್ಬು ಯಾವುದಾದರೂ ಒಂದು ಕಾರ್ಖಾನೆಯವರು ಅರೆಯುವುದಕ್ಕೆ ಸಾಧ್ಯವೇ? ಈ ವರ್ಷ ಅವರು 10 ಲಕ್ಷ ಟನ್ ಕಬ್ಬು ಅರಿದಿದ್ದಾರೆ. ಉಳಿದ ಕಬ್ಬನ್ನು ಅವರು ಅರಿಯುವುದಕ್ಕೆ ಸಾಧ್ಯವಾಗಲಿಲ್ಲ. ಸುಮಾರು 18 ತಿಂಗಳು, 20 ತಿಂಗಳು ಕಬ್ಬು ಹಾಗೆಯೇ ಉಳಿದಿದೆ.

ಅದಕ್ಕೆ ನಾವೇನು ವಿನಂತಿ ಮಾಡಿದೆವು ಅಂದ್ರೆ ಇನ್ನೂ ಒಂದು ತಿಂಗಳು ಸೆಪ್ಟೆಂಬರ್‌ವರೆಗೂ ಕಬ್ಬನ್ನು ಅರಿಯಿರಿ ಸಾಧ್ಯವಾದಷ್ಟು ರೈತರಿಗೆ ಅನುಕೂಲ ಮಾಡಿಕೊಡಿ ಎಂದು ವಿನಂತಿ ಮಾಡಿಕೊಂಡರೂ ಅವರು ರೆಡಿಯಾಗಿಲ್ಲ. ಅಷ್ಟೇ ಅಲ್ಲ, ರೈತರ ಪರವಾಗಿ ನಾವು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಕೇಳಿದೆವು. ಒಂದು ವೇಳೆ ರಿಕವರಿ ಕಡಿಮೆ ಬಂದರೆ ಆ ಪ್ರಮಾಣದಲ್ಲಿ ರೇಟು ಸ್ವಲ್ಪ ಕಡಿಮೆ ಮಾಡಿದರೂ ಕೂಡ ನಾವು ಅದನ್ನು ತೆಗೆದುಕೊಳ್ಳುವುದಕ್ಕೂ ಸಹ ಸಿದ್ಧರಿದ್ದೇವೆ ಎಂದು ಹೇಳಿದೆವು. ಅದಕ್ಕೂ ಸಹ ಅವರು ಒಪ್ಪಿಲ್ಲ. ಈಗ ಕಾರ್ಖಾನೆಯನ್ನು ಬಂದ್ ಮಾಡಿದ್ದಾರೆ. ದಯಮಾಡಿ ಸರ್ಕಾರ ಮಧ್ಯಸ್ಥಿಕೆ ವಹಿಸಿ ಸಮೀರವಾಡಿಯಲ್ಲಿರುವ ಸೋಮಯ್ಯನವರ ಒಡೆತನಕ್ಕೆ ಸೇರಿದ ಗೋದಾವರಿ ಸಕ್ಕರೆ ಕಾರ್ಖಾನೆ ಏನು ಇದೆ ಅದನ್ನು ಇನ್ನೂ ಒಂದು ತಿಂಗಳು ಕಬ್ಬು ಅರೆಯುವುದನ್ನು ಮುಂದುವರಿಸಬೇಕು ಮತ್ತು ಈ ರೈತರ ಸಮಸ್ಯೆಯನ್ನು ಬಗೆಹರಿಸಬೇಕೆಂದು ನಾನು ವಿನಂತಿ ಮಾಡುತ್ತೇನೆ. ಇನ್ನೊಂದು ವಿಚಾರ ಅವರು ಲಾಂಗ್‌ಟರ್ಮ್ ಬಾಂಡ್ ಮಾಡಿಕೊಂಡಿದ್ದಾರೆ. ಅವರು ಫ್ಯಾಕ್ಟರಿ ಪರವಾಗಿ ಅಷ್ಟೇ ಮಾಡಿಕೊಂಡಿದ್ದಾರೆ ರೈತರ ಪರ ಬಾಂಡ್ ಇಲ್ಲ. ಮತ್ತು ಬಾಂಡ್ ಮಾಡಿದ ಕಾಪಿ ಕೂಡ ರೈತರಿಗೆ ಕೊಡುವುದಿಲ್ಲ. ಆ ಬಾಂಡ್ ಕಾಪಿ ಕೊಡಿಸುವಂತಹ ವಿಚಾರ ಸರ್ಕಾರ ಮಾಡಬೇಕು, ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಶ್ರೀ ಉಮೇಶ್ ವಿ. ಕತ್ತಿ:- ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ಹೇಳಿದಂತೆ ಮಾನ್ಯ ಕಾಜೋಳ್‌ರವರು ಎತ್ತಿದಂತಹ ಸಮಸ್ಯೆ ಬಗ್ಗೆ ಹೇಳುವುದಾದರೆ ಗೋದಾವರಿ ಸಕ್ಕರೆ ಕಾರ್ಖಾನೆಯವರು ಎಷ್ಟು ಸಾಧ್ಯವೋ ಅಷ್ಟು ಸಮಯ ಈಗಾಗಲೇ ಮುಂದುವರಿಸಿದ್ದಾರೆ. ಅವರು ಹೋದ ವಾರದವರೆಗೂ ಮುಂದುವರಿಸಿದ್ದಾರೆ. ಫ್ಯಾಕ್ಟರಿಯವರು ಮುಂದಿನ ಸೀಜನ್ ಪ್ರಾರಂಭ ಮಾಡಬೇಕಾದರೆ ಕ್ಲೀನಿಂಗ್ ಮಾಡಿಸಬೇಕಾಗುತ್ತದೆ. ಕ್ಲೀನಿಂಗ್ ಮಾಡಬೇಕಾದರೆ ಎರಡು ತಿಂಗಳು ಆಗುತ್ತದೆ. ಅದರ ಜೊತೆಗೆ ಸಾಕಷ್ಟು ಮಳೆ ಆಗುತ್ತಿರುವುದರಿಂದ ಕಾರ್ಖಾನೆಗೆ ಕಬ್ಬು ಬರುವುದಕ್ಕೆ ತೊಂದರೆ ಇರುವುದರಿಂದ ಕಾರ್ಖಾನೆಯನ್ನು ಮುಚ್ಚುವ ಯೋಜನೆ ಹಾಕಿಕೊಂಡಿದ್ದಾರೆ. ಮುಚ್ಚಿದ ನಂತರ ಎರಡು ತಿಂಗಳಲ್ಲಿ ಕ್ಲೀನಿಂಗ್ ಮಾಡಿ ಮತ್ತೆ ಪ್ರಾರಂಭ ಮಾಡಬೇಕಾಗುತ್ತದೆ. ನಮಗೆ ಎಷ್ಟು ಸಾಧ್ಯವೋ ಅಷ್ಟು ಸಮಯ ಕಾರ್ಖಾನೆ ಮುಂದುವರಿಸುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಇನ್ನು ಮಾನ್ಯ ಪುಟ್ಟಣ್ಣಯ್ಯನವರು ಹೇಳಿದಂತೆ ರೈತರಿಗೆ ಬಡ್ಡಿ ಕೊಡುವ ಬಗ್ಗೆ ಮಾನ್ಯ ಉಪಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಾಕಷ್ಟು ಚರ್ಚೆ ಮಾಡಿದ್ದೇವೆ. ಆ ಚರ್ಚೆಯಲ್ಲಿ ಯಾವುದೇ ಒಂದು ತೀರ್ಮಾನಕ್ಕೆ ಬರಲಿಕ್ಕೆ ಆಗಲಿಲ್ಲ. ಆದು ಕೇಂದ್ರ ಸರ್ಕಾರದ ಒಂದು ನೀತಿ ಇರುವುದರಿಂದ ಕೇಂದ್ರದವರು ಬೇರೆ ಬೇರೆ ರಾಜ್ಯದವರಿಗೆ ಯಾವ ರೀತಿಯಲ್ಲಿ ಕೊಡುತ್ತಾರೆ ಅದೇ ರೀತಿಯಲ್ಲಿ ನಮ್ಮ ರಾಜ್ಯಕ್ಕೂ ಕೊಡಬೇಕೆಂದು ನಾಳೆ ಬರುವಂತಹ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆಯುವ ಸಭೆಯಲ್ಲಿ ಒಂದು ತೀರ್ಮಾನ ಕೈಗೊಳ್ಳಲಾಗುವುದು. ಆದಕಾರಣ 8ನೇ ತಾರೀಖು ಬೆಳಿಗ್ಗೆ 9ಗಂಟೆಗೆ ಈ ಕಬ್ಬಿನ ಸಮಸ್ಯೆ ಬಗ್ಗೆ ಆಗಲಿ, ಎಸ್.ಎ.ಪಿ ರೇಟು ಬಗ್ಗೆ ಆಗಲಿ ಮೀಟಿಂಗ್ ಕರೆದಿದ್ದೇವೆ ಆ

ಮೀಟಿಂಗ್‌ನಲ್ಲಿ ಎಲ್ಲಾ ಮಾನ್ಯ ಸದಸ್ಯರ ಸಲಹೆ ಮೇರೆಗೆ ಒಂದು ತೀರ್ಮಾನಕ್ಕೆ ಬರಲಾಗುವುದು. ಆದ್ದರಿಂದ ತಮ್ಮ ಸಲಹೆಗಳನ್ನು ಕೊಡಿ ಎಂದು ನಾನು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಮಾನ್ಯ ಅಧ್ಯಕ್ಷರೇ, ನಾವೇ ನಿಯಾಮವಳಿಗಳನ್ನು ಮಾಡಿಕೊಂಡಿದ್ದೇವೆ. ಆ ಸ್ಥಾನದಲ್ಲಿ ಕುಳಿತುಕೊಂಡು ತಾವು ನಿಯಮಾವಳಿಗಳ ಪ್ರಕಾರ ಅವಕಾಶವನ್ನು ಕೊಡಬೇಕಾಗುತ್ತದೆ. ಯಾವುದೇ ನಿಯಮಾವಳಿಗಳನ್ನು ರದ್ದುಮಾಡುವುದಕ್ಕೂ ತಮಗೆ ಅಧಿಕಾರ ಇದೆ ನಿಜ. ಕಬ್ಬಿನ ವಿಚಾರದಲ್ಲಿ ನಮ್ಮ ಸರ್ಕಾರ ಮಾಡಿದಷ್ಟು 45 ವರ್ಷಗಳಲ್ಲಿ ಯಾವ ಸರ್ಕಾರವೂ ಮಾಡಿರಲಿಲ್ಲ. ಇವತ್ತು ಕಬ್ಬು ಸಾಗಾಣಿಕೆ ಮಾಡಲಿಕ್ಕೆ ಯಾವ ಸರ್ಕಾರ ಸಬ್ಸಿಡಿಯನ್ನು ಕೊಟ್ಟಿದ್ದರು ಸ್ವಾಮಿ. ಹೋದಸಾರಿ ಖಂಡಸಾರಿ ಕಾರ್ಖಾನೆಗಳನ್ನು ನಡೆಸುವುದಕ್ಕೂ ಸಹ ನಾವು ಸಹಕಾರ ಕೊಟ್ಟಿದ್ದೇವೆ. ಅಷ್ಟೇ ಅಲ್ಲ, ಈಗ ನಡೆಯುತ್ತಾ ಇರತಕ್ಕಂಥಾ ಕಾರ್ಖಾನೆಗಳು ಒಂದು ತಿಂಗಳು ಎರಡು ತಿಂಗಳು ನಡೆಯುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಕಬ್ಬು ಒಂದೇ ಸಾರಿ ಈ ರಾಷ್ಟ್ರದಲ್ಲಿ ಅಥವಾ ರಾಜ್ಯದಲ್ಲಿ ಜಾಸ್ತಿ ಆಗಿರುವುದು ಸಕ್ಕರೆ ಹೋರದೇಶಕ್ಕೆ ಹೋಗದೇ ಇರುವುದಕ್ಕೆ ನಾನು ಇಲ್ಲಿ ಉತ್ತರ ಕೊಡುವುದಕ್ಕೆ ಆಗುತ್ತದೆಯೋ? ಆದರೂ ಇವತ್ತು ನಾನು ನಮ್ಮ ಪ್ರಧಾನಿಗಳನ್ನು ಅಭಿನಂದಿಸಬೇಕು ಎಂದು ಹೇಳುತ್ತೇನೆ. ಮಾನ್ಯ ಪುಟ್ಟಣ್ಣಯ್ಯನವರು ಈ ಸಮಸ್ಯೆಯನ್ನು ಎತ್ತಿದ್ದಾರೆ. ತಮಗೆ ಗೊತ್ತಿರುವ ಹಾಗೆ, ಮಾನ್ಯ ಉಪಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಎಲ್ಲಾ ಫ್ಯಾಕ್ಟರಿಗಳ ವಿಚಾರದಲ್ಲಿ ನಾವು ಚರ್ಚೆ ಮಾಡಿದ್ದೇವೆ. ಮತ್ತು ಮಾನ್ಯಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಭೆ ಮಾಡಬೇಕೆಂದು ಹೇಳಿದಾಗ ಇದರ ಬಗ್ಗೆ ನನ್ನದೇನೂ ತಕರಾರು ಇಲ್ಲ. ಅಧ್ಯಕ್ಷರು ತಾವು ಯಾವುದಕ್ಕೆ ಎಷ್ಟು ಸಮಯ ಕೊಡಬೇಕು ಎನ್ನುವುದನ್ನು ನಿಗಧಿ ಮಾಡಿ. ಪ್ರತಿಯೊಂದು ವಿಚಾರದಲ್ಲಿಯೂ ಸಹ ನಾವು ಈ ರೀತಿ ಗಂಟೆಗಟ್ಟಲೆ ಮಾತನಾಡಿಕೊಂಡು ಕುಳಿತುಕೊಂಡರೆ ಈ ಸಭೆಗೆ ಗೌರವ ಬರುವುದಿಲ್ಲ. ಸರ್ಕಾರಕ್ಕೂ ಒಂದು ಇತಿಮಿತಿ ಇರುತ್ತದೆ. ಪ್ರತಿಯೊಂದು ವಿಚಾರದಲ್ಲಿಯೂ ಸಹ ಯಾವ ರೀತಿಯಲ್ಲಿ ಸಂದೇಶ ಹೋಗುತ್ತದೆ. ನಾವೇನು ಇಲ್ಲಿ ಸುಮ್ಮನೆ ಕುಳಿತಿಲ್ಲ, ಸರ್ಕಾರ ಕೆಲಸ ಮಾಡುತ್ತಿದೆ. ಕಬ್ಬಿನ ವಿಚಾರ ಇರಬಹುದು, ರಿಸರ್ವೇಷನ್ ವಿಚಾರ ಇರಬಹುದು. ಯಾವುದೇ ವಿಚಾರ ಇರಬಹುದು. ಎಲ್ಲಾ ವಿಚಾರಗಳಲ್ಲಿಯೂ ನಾವು ತಕ್ಷಣ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ವಿರೋಧ ಪಕ್ಷದವರಿಗೆ ಕೇಳುವ ಹಕ್ಕು ಇದೆ ತಾವು ಕೇಳಿ. ಆದರೆ ಅಧ್ಯಕ್ಷರು ಅದಕ್ಕೆ ಒಂದು ನಿಗದಿತ ಸಮಯ ಗೊತ್ತು ಮಾಡಿ. ಈ ವಿಚಾರದಲ್ಲಿ ಸರ್ಕಾರದ ಭಾವನೆಯನ್ನು ಅರ್ಥಮಾಡಿಕೊಳ್ಳಿ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಉಪಾಧ್ಯಕ್ಷರು:- ತಾವು ಹೇಳಿದ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಮಾಡೋಣ.